# ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ನ್ಯಾಯಾಲಯ

## ಕೆ.ಆರ್.ನಗರ

**ಸಿ.ಸಿ.942/2020**

**ಪಿಡಬ್ಲೂ-1**

**ಸಿಡಬ್ಲೂ-3**

| | | |
|---|---|---|
| ಸಾಕ್ಷಿದಾರರ ಹೆಸರು | - | ಶಮೀಲ್ ಅಹ್ಮದ ಬೇಗ |
| ತಂದೆಯ ಹೆಸರು | - | ಲೇಟ್ ಇಲಿಯಾಸ್ ಬೇಗ |
| ವಯಸ್ಸು | - | 52 |
| ಕೆಲಸ | - | ಅಬಕಾರಿ ಕಾನಸ್ಟೇಬಲ್, ಹುಣಸೂರು ಅಬಕಾರಿ ಕಚೇರಿ |
| ವಾಸ | - | ಹುಣಸೂರು |

ದಿನಾಂಕ 21-09-2022 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋದಿಸಲಾಯಿತು.

ಮುಖ್ಯ ವಿಚಾರಣೆ ಮಾನ್ಯ ಎಪಿಪಿಯವರಿಂದ

2017 ರಿಂದ ನಾನು ಹುಣುಸೂರು ವಿಭಾಗದಲ್ಲಿ ನಾನು ಅಬಕಾರಿ ರಕ್ಷಕನಾಗಿ ಕೆಲಸ ಮಾಡುತ್ತಿದ್ದು ಈಗ 1 ವರ್ಷದಿಂದ ಅಬಕಾರಿ ಕಾನಸ್ಟೇಬಲ್ ನಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿ:18.03.2019 ರಂದು ನಾನು ಮತ್ತು ಚಾಸಾ 8 ರವರು ಕೆ ಆರ್ ನಗರನ ಆಂಜನೇಯ ಬ್ಲಾಕ ನ ಆಂಜನೇಯ ದೇವಸ್ಥಾನದ ಬಳಿ ಗಸ್ತು ಮಾಡುತ್ತಿದ್ದಾಗ ಚಾಸಾ 8 ರವರಿಗೆ ಅಕ್ರಮವಾಗಿ ಮದ್ಯ ಸಾಗಾಣೆ ಮಾಡುತ್ತಿದ್ದಾರೆ ಎಂದು ಮಾಹಿತಿ ಬಂದಿದ್ದು ಆಗ ನಾವು ಕೆ ಆರ್ ನಗರದ ಆಂಜನೇಯ ಬ್ಲಾಕ್ ನ ಆಂಜನೇಯ ದೇವಸ್ಥಾನದ ರಸ್ತೆ ಬಳಿ ಸಾರ್ವಜನಿರನ್ನು ದಾಳಿಯ ಸಮಯದಲ್ಲಿ ಪಂಚರಾಗಿ ಹಾಜರಿರುವಂತೆ ಕೋರಿರುತ್ತೇವೆ. ಆಗ ಚಾಸಾ 1 ಮತ್ತು 2 ರವರು ಪಂಚರಾಗಿ ಬರಲು ಒಪ್ಪಿರುತ್ತಾರೆ. ನಂತರ ಪಂಚರ ಜೊತೆ ಒಂದು ದ್ವಿ ಚಕ್ರ ವಾಹನ ಟಿವಿಎಸ್ ಎಕ್ಸಲ್ ಹೆವಿ ಡ್ಯೂಟಿ ವಾಹನ ಸಂಖ್ಯೆ ಕೆಎ-45-ಆರ್-64249 ರಲ್ಲಿ ಒಬ್ಬ ವ್ಯಕ್ತಿಯು ವಾಹನದಲ್ಲಿ ಒಂದು ಬಿಳಿ ಚೀಲವನ್ನು ಇಟ್ಟುಕೊಂಡು ಬರುತ್ತಿದ್ದು ಆಗ ನಾನು ಸದರಿ ವಾಹನಕ್ಕೆ ನಿಲ್ಲಿಸುವಂತೆ ಕೈ ಅಡ್ಡಪಡಿಸಿದಾಗ ಸಮವಸ್ತ್ರದಲ್ಲಿದ್ದ ನಮ್ಮನ್ನು ನೋಡಿ ಆ ವ್ಯಕ್ತಿ ನಮ್ಮಿಂದ 50 ಮೀಟರ್ ದೂರದಲ್ಲಿ ದ್ವಿ ಚಕ್ರ ವಾಹನ ನಿಲ್ಲಿಸಿ ಓಡಲು ಪ್ರಯತ್ನಿಸಿರುತ್ತಾನೆ ನಾವು ಅವನನ್ನು ಹಿಡಿಯಲು ಪ್ರಯತ್ನಿಸಿದಾಗ ಆತ ಕೈಗೆ ಸಿಗದೆ ಓಡಿ ಹೋಗಿರುತ್ತಾನೆ. ನಂತರ ಸ್ಥಳಕ್ಕೆ ಬಂದು ಸದರಿ ವಾಹನದಲ್ಲಿ 1 ಬಿಳಿ ಪ್ಲಾಸ್ಟಿಕ್ ಚೀಲ ಇದ್ದು ಅದನ್ನು ಶೋಧಿಸಲು ಶೋಧನಾ ಸಮುಚ್ಚಿತ ಆಧಾರವನ್ನು ತಯಾರಿಸಿ ಶೋಧನೆ ಮಾಡಿರುತ್ತವೆ. ನಂತರ ಸದರಿ ಚೀಲವನ್ನು ಬಿಚ್ಚಿ

ನೋಡಲಾಗಿ ಅದರಲ್ಲಿ 90 ಎಂ ಎಲ್ ನ 96 ಓರಿಜಿನಲ್ ಚಾಯ್ಸು ಡಿಲಕ್ಸ ವಿಸ್ಕಿ ಟೇಟ್ರಾ ಪ್ಯಾಕೇಟ ಗಳು ಇರುವುದು ಕಂಡುಬಂದಿತು. ಮದ್ಯಕ್ಕೆ ಸಂಬಂಧಿಸಿದಂತೆ ಯಾವುದೇ ಬಿಲ್ಲುಗಳು ಇರಲಿಲ್ಲ. ಒಟ್ಟು ಮದ್ಯದಲ್ಲಿ 27 ಓರಿಜಿನಲ್ ಚಾಯ್ಸು ಟೇಟ್ರಾ ಪ್ಯಾಕೆಗಳನ್ನು ರಾಸಾಯಿನಿಕ ಪರೀಕ್ಷೆಗಾಗಿ ಪ್ರತ್ಯೇಕಿಸಿ ಅವುಗಳನ್ನು ಬಿಳಿ ಬಣ್ಣದ ಚೀಲವನ್ನು ಹೊಲೆದು ಅವುಗಳನ್ನು ಬಿಳಿ ಬಣ್ಣದ ಚೀಲದಲ್ಲಿ ಹಾಕಿ ಅರಗು ಲೇಪಿಸಿ ಇಲಾಖಾ ಸೀಲನ್ನು ಹಾಕಿ ಅದಕ್ಕೆ ಪ್ರಕರಣದ ವಿವರವನ್ನು ಬಿಳಿ ಚೀಲದ ಮೇಲೆ ಬರೆದು ಅದರ ಮೇಲೆ ಪಂಚರು ಸಹಿ ಪಡೆದು ಅದನ್ನು ಬಿಳಿ ಚೀಲಕ್ಕೆ ಅಂಟಿಸಿರುತ್ತವೆ. ಅದೇ ರೀತಿ ವಾಹನಕ್ಕೂ ಬಿಳಿ ಚೀಟಿಯನ್ನು ಅಂಟಿಸಿರುತ್ತೇವೆ. ಚಾಸಾ 8 ರವರು ನೀಡಿದ ಉಕ್ತಲೇಖನದ ಮೇರೆಗೆ ಅಮಾನತ್ತು ಮಹಜರ್ ನ್ನು ನಾನು ಬರೆದಿರುತ್ತೇನೆ.

ಸಾಕ್ಷಿಯು ಅಮಾನತ್ತು ಮಹಜರ್ ನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ 1 ಎಂದು ಹಾಗೂ ಸಾಕ್ಷಿ ಸಹಿಯನ್ನು ನಿಪಿ 1 ಎ ಎಂದು ಗುರುತಿಸಲಾಯಿತು. ಬಿಳಿಯ ಪ್ಲಾಸ್ಟೀಕ್ ಚೀಲವನ್ನು ನೋಡಿ ಗುರುತಿಸಿದ್ದು ಅದನ್ನು ಮು.ಮಾ 1 ಎಂದು ಗುರುತಿಸಲಾಯಿತು. ಬಿಳಿಯ ಬಟ್ಟೆಯನ್ನು ನೋಡಿ ಗುರುತಿಸಿದ್ದು ಅದನ್ನು ಮು.ಮಾ 2 ಎಂದು ಗುರುತಿಸಲಾಯಿತು. 27 ಓರಿಜಿನಲ್ ಚಾಯ್ಸು ವಿಸ್ಕಿಯನ್ನು ನೋಡಿ ಗುರುತಿಸಿದ್ದು ಅದನ್ನು ಮು.ಮಾ 3 ಎಂದು ಒಟ್ಟಾರೆಯಾಗಿ ಗುರುತಿಸಲಾಯಿತು. ನಂತರ ಮದ್ಯವನ್ನು ಅಮಾನತ್ತುಪಡಿಸಿಕೊಂಡು ಕಚೇರಿಗೆ ಹಿಂದಿರುಗಿರುತ್ತೇವೆ. 50 ಮೀ ದೂರದಲ್ಲಿ ಆರೋಪಿ ವಾಹನ ನಿಲ್ಲಿಸಿ ಓಡಿ ಹೋದ ಕಾರಣ ಆತನನ್ನು ಗುರುತಿಸಲು ಆಗಿಲ್ಲ. ಆರೋಪಿಯನ್ನು ಸಾಕ್ಷಿಯು ನೋಡಿ ಗುರುತಿಸುವಲ್ಲಿ ವಿಫಲವಾಗಿರುತ್ತಾರೆ. ಆರೋಪಿಯ ವಾಹನ ನೋಡಿದರೆ ಗುರುತಿಸುತ್ತೇನೆ. ಈ ಪ್ರಕರಣದಲ್ಲಿ ವಾಹನದ ಪೋಟೋಗಳನ್ನು ಲಗತ್ತಿಸದ ಕಾರಣ ಅವುಗಳನ್ನು ಹಾಜರುಪಡಿಸಲು ತನಿಖಾಧಿಕಾರಿಗೆ ಸೂಚಿಸಲು ಮಾನ್ಯ ಎಪಿಪಿ ಯವರು ಕೋರಿರುತ್ತಾರೆ. ಆದ್ದರಿಂದ ಮುಖ್ಯ ವಿಚಾರಣೆ ಮುಂದೂಡಲಾಯಿತು.

(ನನ್ನ ಉಕ್ತ ಲೇಖನದ ಮೇರೆಗೆ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೇ ಸ ಇದೆ ಎಂ

(ಪವಿತ್ರ.ಆರ್)
ಪ್ರಧಾನ ಸಿವಿಲ್ ನ್ಯಾಯಾಧೀಶರು,
ಮತ್ತು ಪ್ರದನ್ಯಾದಂ., ಕೆ.ಆರ್.ನಗರ